Reg No M. 1229 Sri 2—3—1956

೩೯ನೇ ವರ್ಷ - 39 th Year

# ಸತ್ಯವಾದಿ

SATYAVADI

ಬಿಡಿ ಪ್ರತಿ 3 ಪೈ ] ಸ್ಥಾಪಕರು : ಅರಮನೆ ಸಿಹಸ್ತೇದಾರ್ ಎಂ. ವಿ. ಸುಬ್ರಾಯರ್ರ

## ಸರಾರಿ ಕೆಲದಲ್ಲಿ ರ ಸ ಗ್ರ ಹ ಕೋಮುಭಾವನೆ ಕೂಡದು

### ಜನತಾ ರಂಗದ ನಿರ್ಣಯ

ಮೈಸೂರು 2 — ಶ್ರೀ ಎಸ್ ಕೆ ಅನಂತ ಕೆಟ್ಟರವರ ಅಧ್ಯಕ್ಷತೆಯಲ್ಲಿ ಕಳೆದ ಸಂಜೆ ಬೊಂಬಾಯಿ ಇಂದ್ರಭವನದಲ್ಲಿ ಜನತಾ ರಂಗದ ವಾರ್ಷಿಕ ಸಭೆ ನೆರವೇರಿತು.

ಪ್ರಧಾನ ಕಾರ್ಯದರ್ಶಿ ಶ್ರೀ ಜೆ ಸ್ವಾಮಿದಾಸರು ಸ್ವಾಗತ ಭಾಷಣ ಮಾಡುತ್ತಾ, ಭಾರತದ ಇಂದಿನ ಪರಿಸ್ಥಿತಿ 1912 ರಲ್ಲಿ ರಷ್ಯದಲ್ಲಿ ಇದ್ದ ಪರಿಸ್ಥಿತಿಯಂತಿದೆ ದೇಶದಲ್ಲೆಲ್ಲ ಬಂಡವಲಷಾಹಿಯ ಜೇಷ್ಟೆ ವಿಪರೀತವಾಗಿದೆ ಇದನ್ನು ಕಡೆಗಟ್ಟುವ ಉದ್ದೇಶ ಜನತಾರಂಗಕ್ಕೆ ಇದೆ ಎಂದರು

ಶ್ರೀಗಳಾದ ಕೆ ಶೇಷಾದ್ರಿ ಕೃಷ್ಣ ರಾವ್ ಭಾಷಣಮಾಡಿದರು

ಈ ಕೆಳಗೆ ಕಂಡ ನಿರ್ಣಯಗಳು ಒಪ್ಪಿತವಾದವು —

1 ಅತ್ಯಗತ್ಯ ಸಣ್ಣ ಬದಲಾವಣೆಗಳೊಂದಿಗೆ ಎಸ್ಸಾರ್ಸಿ ವರದಿಯನ್ನು ಅಂಗೀಕರಿಸಬೇಕೆಂದೂ ಈ ಸಭೆ ಒತ್ತಾಯಿಸುತ್ತದೆ

2 ಪ್ರಪಂಚದ ಯಾವುದೇ ನಾಗರೀಕ ದೇಶದಲ್ಲಿ ಇರಬಾರದ ಜಾತ್ಯಾತೀತ ಸಮಾಜ ವ್ಯವಸ್ಥೆ ವಿರುದ್ಧವಾದ ಈಗ ಅನುಸರಿಸುತ್ತಿರುವ ಜಾತೀಯ ಭಾವನೆ ಮೇಲೆ ಸರ್ಕಾರಿ ಕೆಲಸಕೊಡಕೂಡದು ಸ್ವತಂತ್ರ ಭಾರತದಲ್ಲಿ ಸರ್ಕಾರಿ ಕೆಲಸಗಳನ್ನು ಯೋಗ್ಯತೆಯ ಮೇಲೆ ಕೊಡತಕ್ಕದ್ದು

ಮುಖ್ಯ ಮಂತ್ರಿಗಳಿಂದ ಅರ್ಪಣೆ

ಬೆಂಗಳೂರು ಫೆ 29— ಲಾಲಬಾಗಿನಲ್ಲಿ ಇಂದು ರಾಜದಂಪತಿಗಳಿಗೆ ನಡೆದ ಸತ್ಕಾರ ಸಮಾರಂಭದಲ್ಲಿ ಮುಖ್ಯ ಮಂತ್ರಿಗಳು ಇರ್ವರ ಪರವಾಗಿ ಗಂಧದ ಮರದ ಕ್ಯಾಸ್ಕೆಟ್ಟನ್ನೂ ರೇಷ್ಮೆ ಸೂಟಿಂಗು ಬಟ್ಟೆಯನ್ನೂ ಅರ್ಪಿಸಿದರು ; ಇರ್ವರಾಣಿಯವರಿಗೆ ಮುಖ್ಯ ಮಂತ್ರಿಗಳ ಪುತ್ರಿಯರಾದ ಶ್ರೀಮತಿ ವಿಜಯಲಕ್ಷ್ಮಿ ಮತ್ತು ವಸಂತಲಕ್ಷ್ಮಿಯವರುಗಳು ಗಂಧದ ಮರದ ಹಾರ ತುರಾಯಿ ಮತ್ತು ರೇಷ್ಮೆ ಸೀರೆಯನ್ನು ಸಮರ್ಪಿಸಿದರು

### ಸತ್ಯಾಗ್ರಹ

ಬೊಂಬಾಯಿ ಫೆ 29— ಸಂಯುಕ್ತ ಮಹಾರಾಷ್ಟ್ರ ಸಮಿತಿಯವರು ( ಕಾಂಗ್ರೆಸ್ಸೇತರ ಪಕ್ಷಗಳವರು ) ಸತ್ಯಾಗ್ರಹವನ್ನು ಬೆಳಗಾಂನಲ್ಲಿ ತಾ || 9 ರಂದೂ ಮಹಾರಾಷ್ಟ್ರದ ಇತರ ಕಡೆಗಳಲ್ಲಿ 16 ರಂದೂ, ಬೊಂಬಾಯಿನಲ್ಲಿ ಫಾ ೦ ತ ಪುನರ್ವಿಂಗಡಣಾ ಮಸೂದೆ ಅಸೆಂಬ್ಲಿ ಮಸೂದೆ ಚರ್ಚೆಗೆ ಬರುವ ದಿನದಂದೂ ನಡೆಸಲು ನಿರ್ಧರಿಸಿರುವರು

---

ನವನಗರದ ಮಹಾರಾಣಿ ಗುಲಾಬ್ ಕುನ್ವರ್‌ಬಾ ರವರು ರೂ ೫೫೦೦೦ ಮತ್ತು ಸೇದರ್‌ಗ್ರಾಮದಲ್ಲಿ ೩೦ ಬಿಗಾ ಜಮೀನನ್ನೂ ದಾನಮಾಡಿದ್ದಾರೆ ; ಸರಕಾರದವರೂ ಅಷ್ಟು ಹಣಹಾಕಿ ಗ್ರಾಮ ಪುರೋಭಿವೃದ್ಧಿ ಮಾಡುವರು

---

3 ನಿರುದ್ಯೋಗ ನಿವಾರಣೆಗೆ 2 ನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಉದ್ದಿಶ್ಯ ಸಾಧನೆ ಆರಿಯುವಷ್ಟಾದೂ ಪ್ರಶಂಸ ಕಾರ್ಯ ನಡೆಯುಬೇಕು

4 ಜನತಾ ರಂಗದ ಕಾರ್ಯಾಚರಣೆಗಳಿಗಾಗಿ ನಿಧಿ ಸಂಗ್ರಹಿಸಬೇಕು

ಶ್ರೀ ಜೆ ಸ್ವಾಮಿದಾಸರು ವಂದನಾರ್ಪಣೆ ಮಾಡಿದರು

## ಮೇ॰ ಇಸ್ಕಂದರ್ ಮಿರ್ಜಾ ಪಾಕಿಸ್ತಾನದ ಅಧ್ಯಕ್ಷರು

ಭಾರತದ ಪೋಸ್ಟಾಫೀಸು ಸೇವಿಂಗ್ಸ್ ಬ್ಯಾಂಕುಗಳಲ್ಲಿ 1955 ರಲ್ಲಿ ಡಿಪಾಜಿಟ್ಟುಗಳು 145.49 ಕೋಟಿಗಳಿದ್ದವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು

ನವದೆಹಲಿ ಫೆ 29— ಬುದ್ಧನ 2500 ನೇ ಜಯಂತಿ ಖರ್ಚಿಗಾಗಿ ಕೇಂದ್ರ ಬಡ್ಜೆಟ್ಟಿನಲ್ಲಿ ರೂ 15 ಲಕ್ಷ ಒದಗಿಸಲಾಗಿದೆ

ಕೊಲಂಬೊ ಮಾ 1— ಸಿಲೋನಿನಲ್ಲಿ ಮುಂದಿನ ವರ್ಷ ವೇ॥ ತಿಂಗಳಲ್ಲಿ ನಡೆಯುವ ಬುದ್ಧ ಜಯಂತಿಯಲ್ಲಿ ಭಾಗ ವಹಿಸಲು ಪ್ರಧಾನಿ ನೆಹ್ರೂರನ್ನು ಆಹ್ವಾನಿಸಲಾಗಿದೆ ; ಈ ವರ್ಷದ ಮೇ ತಿಂಗಳಲ್ಲಿ ಉತ್ಸವ ಪ್ರಾರಂಭವಾಗಿ ಮುಂದಿನ ವರ್ಷ ಮೇ ತಿಂಗಳಲ್ಲಿ ಮುಕ್ತಾಯಗೊಳ್ಳುವುದು.

ಕರಾಚಿ ಮಾ 1— ಪಾಕಿಸ್ತಾನದ ಈಗಿನ ಗವರ್ನರ್‌ಜನರಲ್ಲಾದ ಮೇ || ಜ || ಇಸ್ಕಂದರ್ ಮಿರ್ಜಾರವರೇ ಪಾಕಿಸ್ತಾನ ಇಸ್ಲಾಂ ರಿಪಬ್ಲಿಕ್ಕಿನ ಪ್ರಥಮ ಹಂಗಾಮಿ ಅಧ್ಯಕ್ಷರಾಗಬೇಕೆಂದು ಪಕ್ಷಾತೀತ ವರ್ಗ ನಿರ್ಧರಿಸಿದೆ ; ಸಾರ್ವತ್ರಿಕ ಚುನಾವಣೆಗಳಿಗಾಗಿ ನೂತನ ಅಧ್ಯಕ್ಷರು ಆಯ್ಕೆ ಆಗುವವರೆಗೂ ಇವರು ಅಧಿಕಾರದಲ್ಲಿರುವರು.

ನವದೆಹಲಿ ಮಾ 1— ಪೋಲಂಡ್ ಗೀಸು ವಿಮಾನಗಳ ಹಾರಾಟದ ಬಗ್ಗೆ ಕಣ್ಣಲ್ಲಿ ಕಣ್ಣಿಟ್ಟು ನೋಡಲಾಗುವುದೆಂದು ಪಂ || ನೆಹರೂ ಲೋಕಸಭೆಯಲ್ಲಿ ತಿಳಿಸಿದರು

ಮೈಸೂರು ಮಾ 1— ಇರ್ವರ ರಾಜದಂಪತಿಗಳಿಗೆತ್ತ ಔತಣ ಸಮಾರಂಭದಲ್ಲಿ ಶ್ರೀಮನ್ಮಹಾರಾಜರವರು ಒಂದು ಅಮೋಘ ಭಾಷಣ ಮಾಡಿದರು.

### ನಾಳೆಯ ಪಂಚಾಂಗ

ಆ || ಮಹಾವಿದ್ವಾನ್ ದೈವಜ್ಞಶಿಖಾಮಣಿ ಸಂಪಕ್ಕೃಷ್ಣಜೋಯಿಸರಂದ

3 ಶನಿವಾರ ಸಪ್ತಮಿ ವಿಶಾಖ (ಬೆ 8-36)

### ದಿವ್ಯವಾಣಿ

ಅಮಿತವಾಗಿ ಮಾತನಾಡುವವನು ಅಧಿಕವಾಗಿ ಅಪಾರ್ಥ ಮಾಡಿಕೊಳ್ಳಲ್ಪಡುವನು

---

ಮೈಸೂರು 2 — ಎಂಪಿಸಿಸಿ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ಈ ಬೆಳಿಗ್ಗೆ ಕೇಂದ್ರ ಆಹಾರ ಸಂಶೋಧನಾಲಯದ ಹೊಸ ಬಡಾವಣೆ ಸಾಡ್ ಅಟಿಂಗ್ ಸಮಾರಂಭ ನಡೆಸಿದರು ಡಾ॥ ವಿ. ಸುಬ್ರಹ್ಮಣ್ಯಂ ಸ್ವಾಗತ ಭಾಷಣ ಮಾಡಿದರು.

ಗ್ವಾಲಿಯರ್ ಫೆ 28— ಮಧ್ಯ ಭಾರತದ ಆರ್ಥಿಕ ಮಂತ್ರಿಗಳು ಅಸೆಂಬ್ಲಿ ಮುಂದೆ ಮುಂದಿನ ವರ್ಷದ ಒಡ್ಡೆಟ್ಟನ್ನು ಮಂಡಿಸಿದರು : ಹೊಸ ವರ್ಷಕ್ಕೆ 2 ಲಕ್ಷ ರೂಗಳ ಉಳಿತಾಯವಿದೆ : ಯಾವ ಹೊಸ ತೆರಿಗೆಯನ್ನೂ ಮಂಡಿಸಿಲ್ಲ.

ನ್ಯೂಯಾರ್ಕ್ ಫೆ 29— ಚೀನಾ ಪ್ರಧಾನಿ ಚೌ ಎನ್ ಲೈ ಭಾರತದ ಪ್ರಧಾನಿ ನೆಹ್ರೂರಿಗೆ ಮುಂಬೈಗೆ ನೀವು ಫೋನ್ ಕೊಟ್ಟರೆ ಪ್ರಾಣಾಪಾಯವುಂಟೆಂದು ಕೇವಲ ಮೂಲಕ ತಿಳಿಸಿದ್ದರೆಂದು ನ್ಯೂಯಾರ್ಕ್ ಟೈಮ್ಸ್ ನಿನ್ನೆ ಪ್ರಕಟಿಸಿದೆ. ಶ್ರೀ ನೆಹರೂ ತಾ || 20 ರಂದು ಬೊಂಬಾಯಿಗೆ ಆಗಮಿಸಿ, ಅಲ್ಬಿಹರ್ಟ್ ಎಂಬ ನೌಕಾ ಪ್ರದರ್ಶನವನ್ನು ವೀಕ್ಷಿಸಲು ಒಂದು ದಿನ ತಂಗಿದ್ದರು, ಆದರೆ ಯಾವ ಅಪ್ರಿಯ ಘಟನೆಯೂ ನಡೆಯಲಿಲ್ಲ — ಹಿಂದೆ ಬಾಂಡುಂಗ ಸಮ್ಮೇಳನದ ಸಂದರ್ಭದಲ್ಲಿ ಭಾರತದ ಕಾಶ್ಮೀರ ಪ್ರಿನ್ಸೆಸ್ಸ್ ವಿಮಾನದ ವಿಧ್ವಂಸಯತ್ನ ನಡೆಯಿತು ಎಂದು ಹಾಂಕಾಂಗಿನಲ್ಲಿನ ಬ್ರಿಟೀಷು ಅಧಿಕಾರಿಗಳಿಗೆ ಕಮ್ಯುನಿಸ್ಟ್ ಚೀನಾ ಇದೇ ರೀತಿ ಎಚ್ಚರ ನೀಡಿತ್ತೆಂಬುದನ್ನೂ ಆ ಪತ್ರಿಕೆ ಇಲ್ಲಿ ಸ್ಮರಿಸುತ್ತದೆ.

ನ್ಯೂ ಉಪೇರಾ ಶ್ರೀ

ಕಿಕ್ಕಿರಿದ ಜನಸ್ತೋಮಕ್ಕೆ ಪ್ರದರ್ಶಿಸಲಾಗುತ್ತಿದೆ

ಕೀರ್ತಿಯುತ 9 ನೇ ವಾರ ಆದರ್ಶ ಸತಿ

ಪಾತ್ರ : ಆರ್. ನಾಗೇಂದ್ರರಾವ್, ಜಯಂತಿ, ಜಾನಕಿ, ಮಾಲತಿ, ಮೋಹನ

ಮಹೋನ್ನತ ಕನ್ನಡ ಚಿತ್ರ [ ದಿನ 3 ಆಟಗಳು ]

ಚಿಕ್ಕ ಚಾರಿತ್ರಿಕ ನಾಟಕ—

# ಜೇಬುನ್ನೀಸಾ

( ಮುಂದುವರಿದುದು )

ಜೇಬು— ( ದಿಲೀಪನು ಬಹಳ ಸಮೀಪಕ್ಕೆ ಬಂದು ದೈನ್ಯದೊಡನೆ ) ನಿಜ, ದಿಲೀಪ್ ; ಇದುವರೆಗೂ ನಾನು ನಿಮಗೆ ಅಜ್ಞಾತ ದಾಸಿ ; ಈ ವಿಷಯವನ್ನು ನೀವು ಅರಿಯಿರಿ ; ಅಜ್ಞಾತವನ್ನು ಭರಿಸಲಾರದೆಯೇ ಅಬ್ಬಾಜಾನರನ್ನು ಕೂಡಾ ನಂಬದೆ ಸಾಹಸದೊಡನೆ ರಾಜಪೊಹರನ್ನು ಸಂಪಾದಿಸಿ ನಿಮ್ಮನ್ನು ಬಿಡುಗಡೆ ಮಾಡಿಸಿ ನನ್ನ ರಹಸ್ಯವಂದಿರಂಕ್ಕೆ ಕರೆಯಿಸಿಕೊಂಡಿರುವೆ

ದಿಲೀ— ( ಸ್ವಲ್ಪ ದೂರ ಹೋಗಿ ತನ್ನೊಳಗೇ ತ್ರಾನು ) ಇದು ಷಡ್ ಷಡ್ ಯುಂತ್ರವೇ ! ನಿಜವೇ ! ಈ ಮುಸ್ಲಿಂ ಕನ್ಯೆ – ಔರಂಗಜೇಬನ ಮಗಳು – ಅಗಲಿರುವ ನೊಗಲ್ ಸಲ್ತನತ್ ಷಹಜಾದಾ – ಒಬ್ಬ ಸಾಮಂತ ರಾಜಕುಮಾರನನ್ನು ಪ್ರೇಮಿಸುವಿಕೆಯೇ ?

ಜೇಬು— ( ಸಮೀಪಕ್ಕೆ ಬಂದು, ದೈನ್ಯ ದೃಷ್ಟಿಯನ್ನು ಪ್ರಸರಿಸುತ್ತಾ ) ಆಲೋಚಿಸುತ್ತಿರುವೆಯಾ, ದಿಲೀಪ್ : ನನ್ನನ್ನು ನಂಬುವುದಿಲ್ಲವೇ ? ನಾನು ಮೊದಲು ಸ್ತ್ರೀ, ಆತರುವಾಯ ವಿಕ್ಕದ್ದು. ನಿಮ್ಮಂಥಾ ಯೋಗ್ಯರು, ವೀರರು, ಸೌಂದರ್ಯವಂತರು ಆದ ಯುವಕರನ್ನು ಪತಿಯಾಗಿ ಅಪೇಕ್ಷಿಸುವುದಕ್ಕಲ್ಲಿ ತಪ್ಪು ಮಾಡುತ್ತಿರುವನೆಂದು ಭಾವಿಸುವುದಿಲ್ಲ : ನನ್ನ ಸುತ್ತಲೂ ಇರುವ ವಾತಾವರಣವು ನನ್ನನ್ನು ನಿರ್ಬಂಧಿಸುತ್ತಿರುವ ಮಾತು ನಿಜ ; ನಾನು ಪಂಜರದಲ್ಲಿ ಬಂಧಿತಳಾಗಿರುವೆನೆಂಬುದು ಕೂಡಾ ತಿಳಿಯದೆ ಹೋಗಲಿಲ್ಲ ; ಆ ದಿನ ಬಂದೀಖಾನೆಯ ಕಿಟಕಿಯ ಮೂಲಕ ನಿಮ್ಮ ಅಪೂರ್ವ ಲಾವಣ್ಯಗಳನ್ನು ನೋಡಿದಂದಿನಿಂದ ನಿಮಗಾಗಿ ತಪಿಸುತ್ತಿದ್ದೆನು ; ರಾಜವಂಶದಲ್ಲಿ ಜನ್ಮವನ್ನೆತ್ತಿದ್ದಕ್ಕಾಗಿ ಖೇದವನ್ನು ಎಷ್ಟೋ ನಿಂದಿಸಿದೆನು ; ನನ್ನ ದಿಲೀಪ್ ಇಲ್ಲದ ಜೀವನವು ನಿರರ್ಥಕವೆಂದೆಂದುಕೊಂಡೆನು. ದಿಲೀಪ್ ! ನನ್ನನ್ನು ನಂಬುವುದಿಲ್ಲವೇ ? ಈ ಜೇಬು ನಿಷ್ಕಾಮವಾದ್ದು ಪವಿತ್ರ ಪ್ರೇಮವು ; ನಾನು ಮೊಗಲ್ ಬಾದಷಾ ಔರಂಗಜೇಬನ ಮಗಳೆಂದು ಭಾವಿಸಬೇಡಿ ; ಒಬ್ಬ ಸಾಮಾನ್ಯ ಕನ್ಯೆಯು ಪ್ರೇಮ ಭಿಕ್ಷವನ್ನು ಬೇಡುತ್ತಿದ್ದಾಳೆ : ಆ ದೃಷ್ಟಿಯಿಂದಲೇ ಈ ದೀನಳನ್ನು ಸ್ವೀಕರಿಸಿರಿ.

[ ದಿಲೀಪನ ಪಾದಗಳ ಮೇಲೆ ಬೀಳುತ್ತಾಳೆ ]

ದಿಲೀಪನು ಚಲಿಸಲಿಲ್ಲ, ನುಡಿಯಲಿಲ್ಲ : ಆ ರಾಜಪುತ್ರನ ಹೃದಯದಲ್ಲಿ ಒಂದು ದೊಡ್ಡ ಬಿರುಗಾಳಿ ಎದ್ದಿತು, ಮೈಯೆಲ್ಲಲ ಬೆವರಿತು ; ರಾಜಕುಮಾರಿಯು ಹಿಡಿದುಕೊಂಡಿದ್ದ ಪಾದಗಳು ಆ ಲಲನೆಯ ಕೈಗಳಲ್ಲಿ ಗಡಗಡ ನಡುಗುತ್ತಲಿವೆ ; ಇದು ನಿಜವೇ ! ಅಲ್ಲದಿದ್ದಲ್ಲಿ ಮೊಗಲ್ ಸಲ್ತನತ್ – ಅಧಿಕಾರಿಣಿ ತನ್ನ ಪಾದಗಳ ಮೇಲೆ ಬೀಳಬೇಕಾದ ಅವಶ್ಯಕತೆ ? ಈ ವಿಷಯದಲ್ಲಿ ಎಷ್ಟು ಹೊಡುಕಿದರೂ ಅತನಿಗೆ ಸಮಾಧಾನ ತಿಳಿಯಲಿಲ್ಲ: ದಿಲೀಪನ ಆಗಿನ ಯೋಜನೆಯು ಅತನ ಸ್ಥಿತಿಯಲ್ಲಿ ಸ್ಪಷ್ಟಗೊಳಿಸುತ್ತದೆ ; ಅತನ ನಿಜಸ್ಥಿತಿಯು ರಾಜಕುಮಾರಿಗೆ ಅರ್ಥವಾದಂತಿದೆ.

ಜೇಬು— ದಿಲೀಪ್ ! ನನ್ನನ್ನು ಕನಿಕರವಾದ ದೃಷ್ಟಿಯಿಂದ ನೋಡುವುದಿಲ್ಲವೇ ? ( ತಲೆಯನ್ನೆತ್ತಿ ರಾಜಕುಮಾರಿಯ ನಯನಗಳೊಳಗೆ ದೀನಭಾವದೊಡನೆ ನೋಡುತ್ತಾಳೆ ; ಇಬ್ಬರ ದೃಷ್ಟಿಗಳೂ ಏಕವಾದವು )

ದಿಲೀ— ( ರಾಜಕುಮಾರಿಯನ್ನು ತನ್ನ ಬಾಹುದ್ವಯಗಳಿಂದ ಎಬ್ಬಿಸುತ್ತಾನೆ : ಹೃದಯಕ್ಕೆ ಆಲಿಂಗನೆ ಮಾಡುತ್ತಾನೆ )

ಜೇಬು— ( ಆನಂದದಿಂದ ಪರವಶಳಾಗಿ ನಿಮಿಷಾಲಕ ನೇತ್ರಗಳೊಂದಿಗೆ ) ಧನ್ಯಳಾದೆ, ನನ್ನ ಸ್ವಾಮಿಗೆ ದಯೆಯುಂಟಾಗಿದೆ. [ತೆರೆ ಬೀಳುವುದು] ಶುಭಂ


ರಣಜಿತ್
ಈ ದಿವಸ
ಟಿಕ್ ಸಾಲ್ (ಹಿಂದಿ)

ಶಕ್ತಿಸುದಾ
— ಉತ್ಸವ ಟಾಕೀಸ್ —


Edited, Printed & Published by Dharma Prachara Nirata M. S Krishna Rao, at the Satyavadi Press, Chamrajpuram. Mysore


ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತಪಾನ

— ತಯಾರಕರು —
ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ
ಲಿಮಿಟೆಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು
ITL ಗ್ರೈಪ್ ಸಿರಪ್

Protect the Cow ಗೋ ಸಂರಕ್ಷಣೆ ಮಾಡಿ
' ಗೋರಕ್ಷಣ ' ಪತ್ರಿಕೆಗೆ ಚಂದಾದಾರರಾಗಿರಿ ; ವಾರ್ಷಿಕ ಚಂದ 8 ಆಣೆ

ವುಡ್‌ಲ್ಯಾಂಡ್ಸ್ ಚಿತ್ರಮಂದಿರದಲ್ಲಿ
2–3–56 ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ತಾರಾಗಣ— ಭಗವಾನ್, ಶಶಿಕಲಾ, ಕಿಶೋರ್‌ಕುಮಾರ್, ಸ್ಮೃತಿ ಬಿಶ್ವಾಸ್ ನೇತ್ರಾನಂದ ನೃತ್ಯಗಳು, ಕರ್ಣಾನಂದ ಸಂಗೀತ ಆಶ್ಚರ್ಯಕರ ಡಂಗುಡಿಸುವ ಸನ್ನಿವೇಶಗಳಿಂದ ಶುಂಬಿತಳುಕುತ್ತಿರುವ ಅತ್ಯಂತ ಮನರಂಜನೀಯ ಹಿಂದಿ ಚಿತ್ರ.
ದಿನವಹಿ 3 ಪ್ರದರ್ಶನ